

ಪ್ರಭುದೇವ–ಶಿವರಾಜ್‌ಕುಮಾರ್; 'ಕರಟಕ ಧಮನಕ'ರಾಗಿ ಚಿತ್ರರಸಿಕರಿಗೆ ಮೋಡಿ ಮಾಡಲು ವಿಫಲವಾದ ಜೋಡಿ

ಜೂನ್ 14 ಹಾಗೂ ಆಗಸ್ಟ್ 14 – ಎರಡು ತಿಂಗಳ ಅಂತರದ ಈ ಎರಡು ದಿನಾಂಕಗಳು ಕನ್ನಡ ಚಿತ್ರರಂಗದ ಎರಡು ಅವಸ್ಥೆಗಳನ್ನು ಸೂಚಿಸುವಂತಿವೆ. ಮೊದಲನೆಯ ದಿನಾಂಕ ಕನ್ನಡ ಚಿತ್ರರಂಗದ ಮೈಲುಗಲ್ಲೊಂದಕ್ಕೆ ಸಾಕ್ಷಿಯಾದರೆ, ಎರಡನೆಯದು ಚಿತ್ರೋದ್ಯಮದ ಹತಾಶೆಯ ಪ್ರತೀಕದಂತಿದೆ.

ಮೊದಲಿಗೆ, ಮೈಲುಗಲ್ಲಿನ ಮಾತು. ಜೂನ್ 14ರಂದು ತೆರೆಕಂಡ 6 ಚಿತ್ರಗಳ ('ಚಿ ತು ಯುವಕರ ಸಂಘ', 'Loveಲಿ', 'ಚೆಫ್ ಚಿದಂಬರ', 'ಕೋಟಿ', 'ಶಿವಮ್ಮ', 'ಯಾವೊ ಇವೆಲ್ಲ') ಮೂಲಕ ಕನ್ನಡ ಚಿತ್ರೋದ್ಯಮ 5000 ಸಿನಿಮಾಗಳ ಗಡಿ ದಾಟಿದೆ. ಆದರೆ, ಈ ಸಂಭ್ರಮವನ್ನು ಗುರ್ತಿಸುವ ಹಾಗೂ ಆಚರಿಸುವ ಮನಸ್ಥಿತಿ ಗಾಂಧಿನಗರದಲ್ಲಿಲ್ಲ. ಇದೇ ವರ್ಷದ ಮಾರ್ಚ್ 4ರಂದು ಕನ್ನಡ ಚಿತ್ರರಂಗಕ್ಕೆ 90 ವರ್ಷಗಳು ತುಂಬಿದ ಸಂದರ್ಭವೂ ಚಿತ್ರರಂಗಕ್ಕೆ ಸಂಭ್ರಮವಾಗಿ ಪರಿಣಮಿಸಲಿಲ್ಲ. ಚಿತ್ರರಂಗವೀಗ 'ದೇವರೇ ದಿಕ್ಕು' ಎನ್ನುವ ಸ್ಥಿತಿಯಲ್ಲಿದೆ. ಪ್ರೇಕ್ಷಕನ ಮೇಲೆ ನಂಬಿಕೆ



ಹೊಸ ಹವಾ ನಿರೀಕ್ಷೆಯಲ್ಲಿ 'ಯುವ'

ಕಳೆದುಕೊಂಡು ದೇವರ ಮೊರೆ ಹೋಗಿದೆ. 'ದಾರಿ ಕಾಣದಾಗಿದೆ ರಾಘವೇಂದ್ರನೇ...' ಎನ್ನುವ ಗೀತೆಯನ್ನು ಈ ಹೊತ್ತಿನ ಚಿತ್ರರಂಗ ಒಕ್ಕೊರಲಿನಿಂದ ಹಾಡುತ್ತಿರುವಂತಿದೆ. ಇದರ ಫಲವಾಗಿಯೇ, ಸ್ವಾತಂತ್ರ್ಯೋತ್ಸವದ ಮುನ್ನಾದಿನ ಆಗಸ್ಟ್ 14ರಂದು ಕನ್ನಡ ಚಿತ್ರರಂಗ ಹೋಮ ಹವನ ನಡೆಸಿದೆ; ಚಿತ್ರೋದ್ಯಮವನ್ನು ಮಬ್ಬಿನಿಂದ ಬೆಳಕಿಗೆ ನಡೆಸು ಎಂದು ಪ್ರಾರ್ಥಿಸಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ 'ಕಲಾವಿದರ ಸಂಘ'ದ ಕಟ್ಟಡದಲ್ಲಿ ನಡೆದ ಪೂಜೆ, ಶಾಂತಿ ಹೋಮದ ಕ್ರಿಯೆಗಳನ್ನು ಜೈಲಿನಲ್ಲಿರುವ ನಟ ದರ್ಶನ್ ಅವರ ಬಿಡುಗಡೆಗಾಗಿ ನಡೆಸಿದ ಪೂಜಾವಿಧಿಗಳು ಎನ್ನುವ ಮಾತೂ ಇದೆ. ಆದರೆ, ಪೂಜೆ ನಡೆಸಿದವರು ಚಿತ್ರರಂಗದ ಒಳಿತಿಗಾಗಿ ನಡೆಸಿದ ಕಾರ್ಯಕ್ರಮವಿದು ಎಂದು ಸ್ಪಷ್ಟಪಡಿಸಿದ್ದಾರೆ. ಉದ್ದೇಶ ಯಾವುದೇ ಇರಲಿ, ದೇವರಿಗೆ ಮೊರೆ ಹೋಗಿರುವ ಪ್ರಸಂಗ ಕನ್ನಡ ಚಿತ್ರರಂಗದ ಹತಾಶೆಗೆ ಕನ್ನಡಿ ಹಿಡಿದಂತಿದೆ.

ಚಿತ್ರರಂಗದ ಪೂಜೆ ಪುನಸ್ಕಾರಗಳನ್ನು ಬೌದ್ಧಿಕ ದಿವಾಳಿತನದ ಪ್ರತೀಕ ಎಂದು ಉದ್ಯಮದ ಒಳಗಿನವರೂ ಸೇರಿದಂತೆ ಕೆಲವರು ಟೀಕಿಸಿದ್ದಾರೆ. ಅವೆಲ್ಲ ಸಕಾರಣ ಟೀಕೆಟಿಪ್ಪಣಿಗಳೇ. ಸಂಕಷ್ಟದ ಸಮಯದಲ್ಲಿ ದೇವರ ಮೊರೆ ಹೋಗುವುದು ತಪ್ಪೇನೂ ಅಲ್ಲ. ಆದರೆ, ಬಿಕ್ಕಟ್ಟಿನಿಂದ ಹೊರಬರಲು ಯಾವುದೇ ಗಟ್ಟಿಯಾದ ಕಾರ್ಯಕ್ರಮ ರೂಪಿಸದೆ, ಚಿಂತಿಸದೆ, ದೇವರಿಗೆ ಮೊರೆ ಹೋಗುವ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತೇವೆಂದು ಹೊರಡುವುದನ್ನು ಬೌದ್ಧಿಕ ದಾರಿದ್ರ್ಯವೆನ್ನದೆ ವಿಧಿಯಿಲ್ಲ. ಹಿರಿಯ ಕಲಾವಿದೆಯೊಬ್ಬರು ದರ್ಶನ್‌ರ ಮೇಲಿರುವ ಆರೋಪವನ್ನೂ